# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 21, ಹೆಬ್ಬಾಳ, ಬೆಂಗಳೂರು-24

ಸಂಖ್ಯೆ: ಸ.ಅ/ವಾ-21/ಪಿ.ಆರ್/26/2022-23

ದಿನಾಂಕ:-11-07-2022

## ::ವಾರ್ಡ್ ಸಮಿತಿ ಸಭೆಯ ನಡವಳಿಗಳು::

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-08-07-2022 ರಂದು ವಾರ್ಡ್ ನಂ:21 ಹೆಬ್ಬಾಳದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

## :: ಸಭೆಗೆ ಹಾಜರಾಗಿದ್ದವರ ವಿವರಗಳು ::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಂ.ವಿಘ್ನೇಶ್ವರ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ ಮೋಹನ್ ಕುಮಾರ್ | ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-21 |
| 3. | ಶ್ರೀ. ಶ್ರೇಯಸ್ ಎಂ.ಎಸ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್) ವಾಡ್ ನಂ. 21 |
| 4. | ಶ್ರೀ. ಅತೀಕ್ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 5. | ಶ್ರೀ. ರಾಜಕುಮಾರ್ | ಕಿರಿಯ ಅಭಿಯಂತರರು (ಬೆಸ್ಕಾಂ) |
| 6. | ಶ್ರೀಮತಿ ಉಷಾರಾಣಿ.ಸಿ.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 7. | ಶ್ರೀ. ಜಿ.ಸ್ವಾಮಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 8. | ಶ್ರೀ. ಜಗದೀಶ ರೆಡ್ಡಿ | ಸಂಚಾರಿ ಪೊಲೀಸ್ ಇಲಾಖೆ. |
| 9. | ಶ್ರೀ. ಸಲ್ಮಾನ್ | ಬೀದಿದೀಪ ನಿರ್ವಹಣೆ ಮೇಲ್ವಿಚಾರಕರು |
| 10. | ಶ್ರೀ. ಶ್ರೀನಿವಾಸ್ | ಮೇಲ್ವಿಚಾರಕರು (ಘನತ್ಯಾಜ್ಯ ನಿರ್ವಹಣೆ) |
| 11. | ಶ್ರೀ. ಸೀನಪ್ಪ | ಅಧ್ಯಕ್ಷರು 1ನೇ ಬ್ಲಾಕ್ ಆನಂದ ನಗರ |
| 12. | ಶ್ರೀ. ವೀರಶೇಖರ ಸ್ವಾಮಿ | ಕಾರ್ಯದರ್ಶಿ, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ, |
| 13. | ಶ್ರೀ. ಪ್ರಕಾಶ್ ಎಂ.ಎಸ್ | ಕಾರ್ಯದರ್ಶಿಗಳು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ, 1ನೇ ಬ್ಲಾಕ್. |
| 14. | ಶ್ರೀ.ಎನ್.ರವಿಚಂದರ್ | ಸ್ಥಳೀಯ ನಿವಾಸಿ |
| 15. | ಶ್ರೀ.ಎನ್.ಶ್ರೀನಿವಾಸನ್ | ಸ್ಥಳೀಯ ನಿವಾಸಿ |
| 16. | ಶ್ರೀ. ಎ.ಕೆ.ಎನ್.ಮೂರ್ತಿ | ಸ್ಥಳೀಯ ನಿವಾಸಿ |
| 17. | ಶ್ರೀ. ಚಂದ್ರಮೋಹನ್ | ಸ್ಥಳೀಯ ನಿವಾಸಿ |
| 18. | ಶ್ರೀ. ಅರುಣ್ ಕಾರಂತ್ | ಸ್ಥಳೀಯ ನಿವಾಸಿ |
| 19. | ಶ್ರೀ. ಲಕ್ಷ್ಮೀ ನಾರಾಯಣ್ | ಸ್ಥಳೀಯ ನಿವಾಸಿ |
| 20. | ಶ್ರೀ. ಅಮರ್‌ನಾಥ್ ಸಿಂಗ್ | ಸ್ಥಳೀಯ ನಿವಾಸಿ |
| 21. | ಶ್ರೀ. ಸುಬ್ಬರಾವ್ | ಸ್ಥಳೀಯ ನಿವಾಸಿ |

ವಾರ್ಡ್ ಸಮಿತಿಯ ವಾರ್ಡ್ ಕಾರ್ಯದರ್ಶಿಗಳಾದ ಶ್ರೀ. ಮೋಹನ್‌ಕುಮಾರ್. ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ-21 ರವರು, ವಾರ್ಡ್ ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ವಾರ್ಡ್‌ನ ಸಮಸ್ಯೆಗಳನ್ನು ಹಂತಹಂತವಾಗಿ ಬಗೆಹರಿಸಲಾಗುತ್ತಿದೆ ಎಂದು ಮೋಹನ್‌ಕುಮಾರ್ ರವರು ತಿಳಿಸಿದಾಗ ವಾರ್ಡ್‌ನ ಎಲ್ಲಾ ಸದಸ್ಯರು ಮೋಹನ್‌ಕುಮಾರ್ ರವರಿಗೆ ಅಭಿನಂದನೆ ಸಲ್ಲಿಸಿ ಮೆಚ್ಚುಗೆಯನ್ನು ಸೂಚಿಸಿರು.

ಈ ದಿನ ನಡೆದ ಸಭೆಯಲ್ಲಿ ಸಾರ್ವಜನಿಕರು ಈ ಕೆಳಕಂಡ ಕುಂದು ಕೊರತೆಗಳನ್ನು ಮನವಿ ಸಲ್ಲಿಸಿರುತ್ತಾರೆ.

1. ಬೆಸ್ಕಾಂನ ಸಹಾಯಕ ಅಭಿಯಂತರರಾದ ಶ್ರೀ. ಅತೀಕ್ ರವರಲ್ಲಿ ವಾರ್ಡ್‌ನಲ್ಲಿ ದುರಸ್ಥಿಗೊಂಡಿರುವ ವಿದ್ಯುತ್ ಕಂಬಗಳನ್ನು ತುರ್ತಾಗಿ ಬದಲಾಯಿಸುವಂತೆ ಸಭೆಯಲ್ಲಿ ಕೋರಲಾಯಿತು.
2. ಬೀದಿ ದೀಪಗಳನ್ನು ನಿರ್ವಹಣೆ ಮಾಡಲು ಸಾರ್ವಜನಿಕರು ಕೋರಿದಾಗ ಸಭೆಯಲ್ಲಿದ್ದ ಗುತ್ತಿಗೆದಾರರು ಮತ್ತು ಮೇಲ್ವಿಚಾರಕರು ತುರ್ತಾಗಿ ಬಗೆಹರಿಸಿಕೊಡುತ್ತೇವೆಂದು ಸಭೆಗೆ ಸೂಚಿಸಿದರು.
3. ಆನಂದನಗರ ಪಾರ್ಕ್‌ನಲ್ಲಿ ಶೌಚಾಲಯ ನಿರ್ಮಿಸಿಕೊಡುವಂತೆ ಸಾರ್ವಜನಿಕರು ಸಭೆಯಲ್ಲಿ ಕೋರಿದರು.
4. ವಾರ್ಡ್ 21 ರಲ್ಲಿ ಜಿಯೋ ಕಂಪನಿಯವರು ಛೇಂಬರ್‌ಗಳನ್ನು ನಿರ್ಮಿಸಿದ್ದು, ಆ ಛೇಂಬರ್‌ಗಳಿಂದ ರಸ್ತೆಯಲ್ಲಿ ತೊಂದರೆಯಾಗದಂತೆ ಉತ್ತಮ ರೀತಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಭೆಯಲ್ಲಿ ಜಿಯೋ ಕಂಪನಿಯವರಿಗೆ ಸೂಚಿಸಲಾಯಿತು.
5. ವಾರ್ಡ್‌ನಲ್ಲಿರುವ ಮರಗಳಲ್ಲಿ ಒಣಗಿರುವ ಮತ್ತು ಬಾಗಿರುವ ರೆಂಬೆಗಳನ್ನು ತೆಗೆಯಲು ಅರಣ್ಯ ಇಲಾಖೆಯವರಿಗೆ ಸಭೆಯಲ್ಲಿ ಸೂಚಿಸಲಾಯಿತು.
6. ಸರ್ವೀಸ್ ರಸ್ತೆಯಿಂದ ಅಂಡರ್‌ಪಾಸ್ ಮುಖಾಂತರ ಆನಂದನಗರ ಕಡೆ ಬರುವ ಭಾರಿ ವಾಹನಗಳನ್ನು ತಡೆಯಲು ಸೂಕ್ತ ಕ್ರಮಕ್ಕಾಗಿ ಟ್ರಾಫಿಕ್ ಪೊಲೀಸ್ ಇಲಾಖೆಯವರಿಗೆ ಸೂಚಿಸಲಾಯಿತು.
7. ಎ.ಜಿ.ಎಸ್ ಕಾಲೋನಿ, 7ನೇ ಮುಖ್ಯ ರಸ್ತೆಯಲ್ಲಿ 2 ಮ್ಯಾನ್‌ಹೋಲ್ ಛೇಂಬರ್‌ಗಳನ್ನು ದುರಸ್ಥಿ ಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸೂಚಿಸಲಾಯಿತು.
8. ಆನಂದನಗರ, ಮನೆ ನಂ.25, 7ನೇ ಮುಖ್ಯರಸ್ತೆ, ಎ.ಜಿ.ಎಸ್ ಕಾಲೋನಿಯಲ್ಲಿ ಸಾಕುಪ್ರಾಣಿಗಳಾದ ಬೆಕ್ಕು ಮತ್ತು ಪಕ್ಷಿಗಳನ್ನು ಸಾಕುತ್ತಿದ್ದು, ಅದರಿಂದ ಸುತ್ತಮುತ್ತಲಿನ ಮನೆಗಳಿಗೆ ತೊಂದರೆಯಾಗುತ್ತಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.

ಮೇಲ್ಕಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ವಾರ್ಡ್‌ನ ಸಹಾಯಕ ಅಭಿಯಂತರರಾದ ಶ್ರೀ. ಮೋಹನ್‌ಕುಮಾರ್ ರವರು ಮೇಲೆ ಚರ್ಚಿಸಲಾಗಿರುವ ಕುಂದುಕೊರತೆಗಳನ್ನು ಆದಷ್ಟು ಬೇಗೆ ಹಂತ ಹಂತವಾಗಿ ಬಗೆಹರಿಸಲಾಗುವುದೆಂದು ವಾರ್ಡ್‌ನ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಕೋರುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE ..-21

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 21, ಹೆಬ್ಬಾಳ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 21, ಹೆಬ್ಬಾಳ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ